ಬನ್ನೂರು ಬಳಿಯ ಏತನೀರಾವರಿ ಯೋಜನೆ

684 - ಶ್ರೀ . ಕೆ.ಎಂ. ಪುಟ್ಟು (ಕಿರುಗಾವಲು): ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬನ್ನೂರು ಬಳಿ ಕಾವೇರಿ ನದಿಗೆ ಏತ ನೀರಾವರಿ ಮಾಡಿ ಅದನ್ನು ನಂಜಾಪುರದ ಹತ್ತಿರ ವಿ.ಸಿ. ನಾಲೆಗೆ ಸೇರಿಸುವ ಯೋಜನೆ ಯಾವ ಹಂತದಲ್ಲಿದೆ.

ಆ) ಪ್ರಸ್ತುತ ಸಾಲಿನಲ್ಲಿ ಈ ಯೋಜನೆಗೆ ಎಷ್ಟು ಹಣ ಒದಗಿಸಲಾಗಿದೆ.

ಇ) ಈ ವರ್ಷ ಸದರಿ ಕಾಮಗಾರಿ ಕೆಲಸಗಳನ್ನು ಕೈಗೆತ್ತಿಗೊಳ್ಳಲಾಗುವುದೇ?

ಈ) ಹಾಗಿದ್ದಲ್ಲಿ ಯಾವಾಗ?

ಶ್ರೀ ಎಸ್.ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು):

ಅ) ಇಂತಹ ಪ್ರಸ್ತಾವನೆ ಯಾವುದು ಇರುವುದಿಲ್ಲ.

(ಅ) ಪ್ರಶ್ನೆಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆಗಳು ಉದ್ಭವಿಸುವುದಿಲ್ಲ.

ಹೇಮಾವತಿ ನಾಲೆಯ ಕಾಮಗಾರಿ ಕೆಲಸಗಳಲ್ಲಿ ಅವ್ಯವಹಾರ

683 - ಶ್ರೀ ಕೆ.ಎಂ. ಪುಟ್ಟು (ಕಿರುಗಾವಲು): ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1992-93ರ ಸಾಲಿನಲ್ಲಿ ಹೇಮಾವತಿ ನಾಲೆಯ ಬೆಳ್ಳೂರು ಮತ್ತು ವಿಡಿಯೂರು ಉಪವಿಭಾಗಗಳಿಗೆ ಮಂಜಾರಾಗಿರುವ ಕಾಮಗಾರಿಗಳೆಷ್ಟು. ಹಾಗೂ ಅವುಗಳ ಅಂದಾಜುಗಳೆಷ್ಟು?

ಆ) ಈ ಕಾಮಗಾರಿಗಳನ್ನು ಪೂರ್ಣಗೊಳಿಸಲು ಖರ್ಚಾಗಿರುವ ಮೊಬಲಗೆಷ್ಟು?

ಇ) ಈ ಬಗ್ಗೆ ಮಂಜಾರಾದ ಅಂದಾಜುಗಳಿಗಿಂತ ಹೆಚ್ಚಿಗೆ ವೆಚ್ಚ ಮಾಡಲಾಗಿದೆಯೇ?

ಈ) ಹಾಗಿದ್ದಲ್ಲಿ ಈ ರೀತಿ ಹೆಚ್ಚಿಗೆ ವೆಚ್ಚ ಮಾಡಲು ಕಾರಣಗಳೇನು?

ಶ್ರೀ ಎಸ್. ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು):

ಅ) 54 ಕಾಮಗಾರಿಗಳು, ಅಂದಾಜು ರೂ. 336.00 ಲಕ್ಷಗಳು.

ಆ) ಕಾಮಗಾರಿಗಳಿಗೆ ಇದುವರೆವಿಗೂ ರೂ. 270.28 ಲಕ್ಷ ಖರ್ಚಾಗಿರುತ್ತದೆ. ಕೆಲಸಗಳು ಪ್ರಗತಿಯಲ್ಲಿವೆ.

ಇ) ಕೆಲವು ಕೆಲಸಗಳಲ್ಲಿ ಹೆಚ್ಚಾಗಿ ಖರ್ಚಾಗಿರುತ್ತದೆ.

ಈ) ಚಾಲ್ತಿ ದರ ಸೂಚಿಯಂತೆ (ಹೆಚ್ಚಾದ ದರಗಳಿಂದ) ಹೆಚ್ಚುವರಿ ವೆಚ್ಚವಾಗಿರುತ್ತದೆ.

ಲೋಕೋಪಯೋಗಿ ಇಲಾಖೆಯ ಇಂಜಿನಿಯರ್‌ಗಳು ಬೇರೆ ಇಲಾಖೆಯಲ್ಲಿ ಕೆಲಸ ನಿರ್ವಹಿಸುವ ಬಗ್ಗೆ

682 - ಶ್ರೀ ಕೆ.ಎಂ. ಪುಟ್ಟು (ಕಿರುಗಾವಲು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಲೋಕೋಪಯೋಗಿ ಇಲಾಖೆಯ ಇಂಜಿನಿಯರುಗಳು, ಆ ಇಲಾಖೆಯ ಆದೇಶಗಳಿಲ್ಲದೆ ಬೇರೊಂದು ಇಲಾಖೆಯಲ್ಲಿ ಕೆಲಸ ಮಾಡಲು ಅವಕಾಶವಿದೆಯೇ?

ಆ) ಹಾಗಿಲ್ಲದಿದ್ದಲ್ಲಿ, ನೀರಾವರಿ ಇಲಾಖೆಗೆ ವರ್ಗವಾಗಿರುವ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಒಬ್ಬರು ರೇಷ್ಮೆ ಇಲಾಖೆಯಲ್ಲಿ ಬಿಲ್ಲುಗಳಿಗೆ ಸಹಿಮಾಡಲು ಸರ್ಕಾರದವರು ಅವಕಾಶ ಮಾಡಿಕೊಟ್ಟಿದ್ದಾರೆಯೇ?